ಬಿಡುಗಡೆ ಪಡೆದಿರಲಿಲ್ಲ. ಹೀಗಾಗಿ ಮಲೀಕ್‌ರು ವಿಧಿಯಿಲ್ಲದೆ ಮಗ ಮತ್ತು ಸೊಸೆಯೊಟ್ಟಿಗೆ ಬಾಡಿಗೆ ಮನೆಯಲ್ಲೇ ವಾಸಿಸಬೇಕಾಯಿತು.

ಮಿಸ್ಟರ್ ಮಲೀಕ್ ಸರಕಾರದಿಂದ ತನ್ನ ಮನೆಯನ್ನು ಬಿಡಿಸಿಕೊಳ್ಳಲು ಇನ್ನೂ ಹೋರಾಟ ನಡೆಸುತ್ತಲೇ ಇದ್ದರು. ಅಷ್ಟರಲ್ಲಿ ಸಾವು ಅವರನ್ನು ಕೊಂಡೊಯ್ದಿತು. ಕೊನೆಗೂ ಮಿಸ್ಟರ್ ಮಲೀಕ್ ತಾವು ಕಟ್ಟಿಸಿದ ಮನೆಯಲ್ಲಿ ಒಂದು ದಿನವೂ ಸಹ ಬಾಳಿ ಬದುಕದೆ ಹಾಗೇ ಹೊರಟುಹೋಗಿಬಿಟ್ಟರು.

ಅವರು ಹೋದ ಮೂರು ತಿಂಗಳಿಗೆ ಸರಿಯಾಗಿ ಸರಕಾರ ಅವರ ಮನೆಯನ್ನು ಕುಟುಂಬದವರಿಗೆ ಹಿಂದಿರುಗಿಸಿತು. ಸ್ವಂತಮನೆಗೆ ಹೊಗಲು ಮಿಸೆಸ್ ಮಲೀಕ್‌ಳಿಗಿಂತ ಅವಳ ಸೊಸೆ ಹೆಚ್ಚು ಕಾತರಳಾಗಿದ್ದಳು. ಮನೆಯು ಅವರ ಕೈಗೆ ಬಂದ ದಿನದಿಂದಲೇ ಆಕೆಯೇ ಖುದ್ದಾಗಿ ನಿಂತು ಮನೆಯ ಗೋಡೆಗಳಿಗೆ ಬಣ್ಣ ಬಳಿಸುವುದು ಹಾಗೂ ಬಾಗಿಲುಗಳಿಗೆ ಪಾಲಿಷ್ ಹಾಕಿಸುವುದನ್ನು ಮಾಡಿದಳು. ಪೀಠೋಪಕರಣಗಳ ವಿತರಕನಿಗೆ ಇಂತಿಂಥದೇ ಪೀಠೋಪಕರಣಗಳು ಆಗಬೇಕೆಂದು ಹೇಳಿ ಅಂಥವನ್ನೇ ಮಾಡಿಸಿ ತರಿಸಿಕೊಂಡಳು.

ಬರುವ ಸೋಮವಾರ ಸ್ವಂತಮನೆಗೆ ಶಿಫ್ಟ್ ಆಗುವದೆಂದು ನಿರ್ಧರಿಸಿದರು. ಆದರೆ ಆವತ್ತು ಬೆಳಗ್ಗೆ ಎದ್ದಾಗ ಮಳೆ ಒಂದೇ ಸಮನೆ ಹುಯ್ಯುತ್ತಿತ್ತು. ಮಳೆ ನಿಲ್ಲಬಹುದೆಂದು ಅವರೆಲ್ಲಾ ಕಾಯ್ದೇ ಕಾಯ್ದರು. ಊಹೂಂ, ನಿಲ್ಲುವ ಲಕ್ಷಣಗಳೇ ಕಾಣಲಿಲ್ಲ. ಇತ್ತ ಮಿಸೆಸ್ ಮಲೀಕ್‌ಳ ಮಗನಿಗೆ ಕೆಲಸಕ್ಕೆ ಹೋಗಲು ಸಮಯವಾಗಿದ್ದರಿಂದ ಅವನು ಸಾಯಂಕಾಲ ತಾನು ಕೆಲಸದಿಂದ ಬಂದ ಮೇಲೆ ಶಿಫ್ಟ್ ಮಾಡಿದರಾಯಿತೆಂದು ಹೇಳಿಹೋದ.

ಮಳೆ ಇಡಿ ದಿನ ಬಿಡದೆ ಧಾರಾಕಾರವಾಗಿ ಸುರಿಯುತ್ತಲೇ ಇತ್ತು. ಸಾಯಂಕಾಲವಾದರೂ ನಿಲ್ಲಲಿಲ್ಲ. ಆದಾಗ್ಯೂ ಮಿಸೆಸ್ ಮಲೀಕ್ ಸೋಮವಾರ ಪ್ರಶಸ್ತ ದಿನವಾಗಿದ್ದರಿಂದ ಆವತ್ತೇ ಶಿಫ್ಟ್ ಆಗಬೇಕೆಂದಳು. ಮಾರನೆಯ ದಿನ ಮಂಗಳವಾರವಾಗಿದ್ದರಿಂದ ಆವತ್ತು ಮನೆ ಬದಲಾಯಿಸುವುದು ಆಕೆಗೆ ಅಷ್ಟು ಸೂಕ್ತವೆನಿಸಲಿಲ್ಲ.

ಮಿಸೆಸ್ ಮಲೀಕ್‌ಳ ಮಗ ತಾಯಿಯ ಮಾತಿಗೆ ಬೆಲೆ ಕೊಟ್ಟು ಅಂದೇ ಸುರಿವ ಮಳೆಯಲ್ಲಿಯೇ ಶಿಫ್ಟ್ ಮಾಡಲು ನಿರ್ಧರಿಸಿದನು. ಒಂದು ಟ್ಯಾಕ್ಸಿ ತರಿಸಿ ಸದ್ಯದ ಅಗತ್ಯಕ್ಕೆ ಬೇಕಾಗುವ ಸಾಮಾನುಗಳನ್ನು ಮಾತ್ರ ಅದಕ್ಕೆ ತುಂಬಿದರು. ಮಿಕ್ಕ ಸಾಮಾನಗಳನ್ನು ಬೇರೆ ದಿವಸ ತಂದುಕೊಂಡರಾಯಿತೆಂದುಕೊಂಡು ಮೂರೂ ಜನ ತಮ್ಮ ಸ್ವಂತ ಕಾರಿನಲ್ಲಿ ಹೊಸಮನೆಯತ್ತ ಹೊರಟರು.

ಮಳೆ ಇನ್ನೂ ಸುರಿಯುತ್ತಲೇ ಇತ್ತು. ಹೊಸಮನೆಯ ಕಡೆ ಹೊರಟಂತೆ ಹಿಂದಿನ ಸೀಟಿನಲ್ಲಿ ಕುಳಿತಿದ್ದ ಮಿಸೆಸ್ ಮಲೀಕ್ ನೆನಪುಗಳಲ್ಲಿ ಕಳೆದುಹೋದಳು. ಮನೆ ಕಟ್ಟಿಸಲು ಎಷ್ಟೊಂದು ಕಷ್ಟಪಟ್ಟಿದ್ದಳು ಆಕೆ! ಅದೆಷ್ಟು ಸಾರಿ ಕೆಲಸದ ಭರದಲ್ಲಿ ಊಟವನ್ನು ಬಿಟ್ಟಿರಲಿಲ್ಲ? ಅದೆಷ್ಟು ಸಾರಿ ಉರಿವ ಬಿಸಿಲಲ್ಲಿ ನಿಂತು ಕೆಲಸವನ್ನು ನೋಡಿಕೊಂಡಿರಲಿಲ್ಲ? ಅದೆಷ್ಟು ಸಾರಿ ಮಳೆಯಲ್ಲಿ ನೆನೆದಿರಲಿಲ್ಲ? ಮನೆಗಾಗಿ ಅದೆಷ್ಟು ಜೀವವನ್ನು ತೇಯ್ದಿರಲಿಲ್ಲ?

ವಾಸ್ತುಶಿಲ್ಪಿಯು ಮನೆಯನ್ನು ಕಟ್ಟಿಯಾದ ಮೇಲೆ ಅದ್ಹೇಗೆ ಕಾಣುತ್ತದೆ ಎಂದು ತೋರಿಸಲು ಅದರ ವಿನ್ಯಾಸವನ್ನು ಬಣ್ಣದ ನಕಾಸೆಯಲ್ಲಿ ಮೂಡಿಸಿದ್ದ. ಅದರಲ್ಲಿ ವರಾಂಡದಲ್ಲಿ ಮನೆಯೊಡತಿಯ ಶಿಲ್ಪಾಕೃತಿಯೊಂದು ಅಮೃತ ಶಿಲೆಯ ಕಂಬವೊಂದಕ್ಕೆ ಒರಗಿಕೊಂಡು ನಿಂತಿತ್ತು. ಆ ಶಿಲ್ಪಾಕೃತಿಯು ಮರೂನ್ ಬಣ್ಣದ ಸೀರೆಯನ್ನುಟ್ಟುಕೊಂಡು, ಮುಖದ ಮೇಲೆ ಸಂತೃಪ್ತಿಯ ನಗೆಯೊಂದನ್ನು ಅಂಟಿಸಿಕೊಂಡು ಅತ್ಯಂತ ಆಕರ್ಷಕವಾಗಿ ಮನೆಗೆ ಬಂದವರನ್ನು ಸ್ವಾಗತಿಸುವಂತಿತ್ತು. ಮಿಸೆಸ್ ಮಲೀಕ್ ಎಂದೂ ಮರೂನ್ ಬಣ್ಣದ ಸಿರೆಯನ್ನು ಉಟ್ಟಿರಲಿಲ್ಲ. ಆದರೂ ವಾಸ್ತುಶಿಲ್ಪಿಯು ತನ್ನ